ಪಿಡಬ್ಲ್ಯೂ೩ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ದಿಃ 24-06-2025

<u>ಪಾಟೀ ಸವಾಲು</u> ಃ ಆರೋಪಿ ಪರಃ ಶ್ರೀ ಎ ಕೆ.ಎನ್ ವಕೀಲರಿಂದಃ

ಘಟನಾ ಸ್ಥಳದಿಂದ ಠಾಣೆಗೆ ಸುಮಾರು 7-8 ಕಿ.ಮೀ ದೂರ ಇರುತ್ತದೆ. ಘಟನಾ ಸ್ಥಳಕ್ಕೆ ಬರಲು ಸ್ಥಳೀಯರು ಮಾಹಿತಿ ನೀಡಿರುತ್ತಾರೆ. ಮಾಹಿತಿ ಬಂದ 10 ನಿಮಿಷಕ್ಕೆ ಸ್ಥಳಕ್ಕೆ ಹೋಗಿರುತ್ತೇನೆ. ಘಟನಾ ಸ್ಥಳಕ್ಕೆ 10.00 ಗಂಟೆಗೆ ತಲುಪಿರುತ್ತೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪಿರ್ಯಾದಿಯನ್ನು ಗಣೇಶ್ ಆಚಾರ್ಯ ಎಂಬುವವರು ಅಪಘಾತ ಸ್ಥಳದಲ್ಲಿ ನೀಡಿರುತ್ತಾರೆ. ಘಟನಾ ಸ್ಥಳಕ್ಕೆ ತಲುಪುವಾಗ ಅಲ್ಲಿ ಸ್ಥಳೀಯರು 7 ರಿಂದ 8 ಸೇರಿದ್ದರು. ಪಿರ್ಯಾದಿಯನ್ನು ಠಾಣೆಗೆ ಕಳುಹಿಸಿದ ನಂತರ ಮಹಜರನ್ನು ಮಾಡಿರುತ್ತೇನೆ. ಮಹಜರನ್ನು ಬೆಳ್ಳಿಗ್ಗೆ 10.15 ರಿಂದ 11.00 ಗಂಟೆಯವರೆಗೆ ಮಾಡಿರುತ್ತೇನೆ. ಮಹಜರಿನಲ್ಲಿ

ಕಾಣಿಸಿರುವ ಸಾಕ್ಷಿದಾರರು ಸ್ಥಳೀಯರಾಗಿದ್ದು ನನ್ನ ಪರಿಚಯದವರಾಗಿರುತ್ತಾರೆ. ಪಂಚರಾಗಿ ಬರಲು ನೋಟೀಸು ನೀಡಿರುವುದಿಲ್ಲ. ಆರೋಪಿಯು ಉಡುಪಿ ನಗರ ಠಾಣೆಯಲ್ಲಿ ದಾಖಲಾಗಿದ್ದ ಅಕ್ರ ನಂಬರ್ 170/2022 ರಲ್ಲಿ ಈ ಪ್ರಕರಣದ ಕಳ್ಳತನದ ಬಗ್ಗೆ ಹೇಳಿಕೆ ನೀಡಿರುತ್ತಾರೆ ಅದರ ಆಧಾರದಲ್ಲಿ ಆತನನ್ನು ಪ್ರಕರಣ ಆರೋಪಿಯನ್ನಾಗಿಸಿದ್ದೇವೆ. ಆರೋಪಿಯ ಖಬುಲಾತಿ ಹೇಳಿಕೆಯನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಯಾವುದೇ ಖಬುಲಾತಿ ಹೇಳಿಕೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಘಟನಾ ದಿನ ಆರೋಪಿ ಘಟನಾ ಪರಿಸರಕ್ಕೆ ಬಂದ ಬಗ್ಗೆ ಆರೋಪಿ ಮೊಬೈಲ್ ಟವರ್ ಪಡೆದುಕೊಂಡಿರುವುದಿಲ್ಲ. ಪ್ರಕರಣದಲ್ಲಿ ಸ್ವಾಧೀನ ಪಡಿಸಿಕೊಂಡ ಸೊತ್ತುಗಳಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಠಾಣೆಯಲ್ಲಿಯೇ ಕುಳಿತು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಬಾಕಿ ಇರುವ ಕಳ್ಳತನ ಪ್ರಕರಣಗಳನ್ನು ಮುಚ್ಚಿ ಹಾಕಲು ಸುಕಾಸುಮ್ಮನೆ ಪರಕರಣಕ್ಕೆ ಸಿಲುಕಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣದಲ್ಲಿ ಹಾಜರುಪಡಿಸಿದ ಸೊತ್ತುಗಳನ್ನು ಸೃಷ್ಟಿಸಿರುತ್ತೇನೇ ಎಂದರೆ ಸರಿಯಲ್ಲ. ನಾನು ಯಾವುದೇ ಪಿರ್ಯಾದಿ, ಸಾಕ್ಷಿದಾರರ ಹೇಳಿಕೆ, ಆರೋಪಿಯ ಖಬೂಲಾತಿ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ